SRI D. DEVARAJ URS.—Yes ನೀವು ಕಟ್ಟಿರುವ ಹಣ ಸಾಕು, ನಾವು ಏನೂ ಕೆಲಸ ಮಾಡುತ್ತೇವೆಯೋ ಅದಕ್ಕೆ ತೃಪ್ತರಾಗಬೇಕು As I have repeatedly said I cancot promise to give water from pipe line to every house.

ಶ್ರೀ ಕೋಣಂದೂರು ಲಿಂಗಪ್ಪ — ಒಂದೊಂದು ಎಸ್ಟಿಮೇಟ್ ಮಾಡಿದಾಗಲೂ ಜಾಸ್ತಿ ಹಣವನ್ನು ಕಟ್ಟಿ ಎಂದು ಪಂಚಾಯತಿಗಳವರನ್ನು ಸರ್ಕಾರದವರು ಕೇಳುತ್ತಿದ್ದಾರೆ. ಕಳೆದ ಐದು ವರ್ಷಗಳಿಂದ ಇದು ಹಾಗೆಯೇ ಹೆಚ್ಚಿಕೊಂಡು ಬರುತ್ತಿದೆ. ಈಗ ಪಂಚಾಯತಿವರಲ್ಲಿ ಇದಕ್ಕೆ ಕಟ್ಟಲು ಹಣ ಇರುವುದಿಲ್ಲ. ಆದ್ದರಿಂದ ಅವರು ಇದುವರೆಗೂ ಕಟ್ಟಿರುವ ಹಣ ಸಾಕು. ಈ ಕೆಲಸಗಳಿಗೆ ರೀ ಎಸ್ಟಿಮೇಟ್ ಮಾಡಿದಾಗಲೂ ಹೆಚ್ಚಿಗೆ ಹಣ ಬೇಕಾದರೆ ಸರ್ಕಾರದವರೇ ನೋಡಿಕೊಳ್ಳುತ್ತೇವೆಂದು ಭರವಸೆ ಕೊಡುತ್ತೀರಾ ?

SRI D. DEVARAJ URS.—That is a suggestion wh.ch I will get it examined.

Shifing of the Labour Courts and Labour Commissioner's Office in Bangaiore.

413 SHRI M. S. KRISHNAN (Mallesweram)Shri V. N. Patil (Humnabad) and.— SHRI B. V. KAKILAYA (Bantwal).—Will the Minister for Labour be pleased to state:—

(*a*) whether it has come to the notice of the Government that the Labour Courts and the Offices of the Labour Commissioner have been shifted to different buildings in Bangalore city ;

(*b*) whether it is not a fact that due to this great inconvenience is caused to the workers, employees and others ;

(*c*) if so, the steps taken by Government to remove the incon venience ?

SHRI C. N. PATIL(Minister for Labour) —

(*a*) Yes.

(*b*) No.

(*c*) does not arise in view of reply to clause (b)

ಶ್ರೀ ಎಂ. ಎಸ್. ಕೃಷ್ಣನ್.—ಲೇಬರ್ ಕೋರ್ಟುಗಳನ್ನು, ಲೇಬರ್ ಕಮಿಷನರ್ ಕಚೇರಿಗಳನ್ನು ವರ್ಗಾವಣೆ ಮಾಡಬೇಕು ಎಂದು ಯಾವಾಗ ತೀರ್ಮಾನ ತೆಗೆದುಕೊಂಡಿರಿ ಮತ್ತು ಯಾವ ಕಾರಣಕ್ಕಾಗಿ ತೀರ್ಮಾನ ತೆಗೆದುಕೊಂಡಿರಿ, ಯಾರಿಗೆ ಈಗ ಆ ಜಾಗವನ್ನು ಕೊಟ್ಟಿದ್ದೀರಿ ಎಂಬುದನ್ನು ತಿಳಿಸುತ್ತೀರಾ?

†ಶ್ರೀ ಸಿ. ಎನ್. ಪಾಟೀಲ್.—ಆರು ತಿಂಗಳ ಹಿಂದೆ ಈ ಬಗ್ಗೆ ತೀರ್ಮಾನವನ್ನು ತೆಗೆದು ಕೊಂಡಿದ್ದೇವೆ. ಅಂದರೆ ಮಾರ್ಚ್ ತಿಂಗಳಲ್ಲಿ ತೀರ್ಮಾನ ಆಗಿದೆ ಲೇಬರ್ ಕಮಿಷನರ್ ಕಚೇರಿ, ಡೆಪ್ಯೂಟಿ ಲೇಬರ್ ಕಮಿಷನರ್ ಕಚೇರಿ, ಲೇಬರ್ ಆಫೀಸರ್ಸ್, ಚೀಫ್ ಇನ್ಸ್‌ಪೆಕ್ಟರ್ ಆಫ್ ಬಾಯಿಲರ್ಸ್ ಈ ಎಲ್ಲಾ ಆಫೀಸುಗಳನ್ನು ಆ ಕಟ್ಟಡದಿಂದ ವರ್ಗಾಯಿಸಿದ್ದಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್. —ಸ್ವಾಮಿ, ಪ್ಯಾಲೇಸ್ ರಸ್ತೆಯಲ್ಲಿದ್ದಂತಹ ಕಾರ್ಮಿಕ ನ್ಯಾಯಾಲಯಗಳ ಕಚೇರಿಗಳನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿ ಆ ಸ್ಥಳವನ್ನು ಬೇರೆ ಯಾರಿಗೋ ಕೊಟ್ಟಿದೆ ಎಂದೂ ತಿಳಿದು ಬಂದಿದೆ, ಆ ಒಂದು ಸ್ಥಳವನು ಯಾರಿಗೆ ಕೊಟ್ಟಿದ್ದೀರಾ? ಏತಕ್ಕೋಸ್ಕರ ಕೊಟ್ಟಿದ್ದೀರಾ?

SRI C. N. PATIL,—We have given that building to Economic and Social Commission for A.C.R. and Pacific United Nations Organisation It has been alloted to them by the Government of Karnataka.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ; ಆ ಸ್ಥಳವನ್ನು ತಾತ್ಕಾಲಿಕವಾಗಿ ಅವರಿಗೆ ಕೊಟ್ಟಿದ್ದೀರೋ, ಅಥವಾ ಖಾಯಂ ಆಗಿ ಕೊಟ್ಟಿದ್ದೀರೋ, ಅವರಿಗೆ ತಾತ್ಕಾಲಿಕವಾಗಿ ಆ ಸ್ಥಳವನ್ನು ಬಿಟ್ಟುಕೊಟ್ಟಿದ್ದರೆ, ಮತ್ತೆ ಆ ಸ್ಥಳವನ್ನು ಎಷ್ಟು ದಿವಸದೊಳಗಾಗಿ ವಾಪಸು ಕೊಡುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಸಿ. ಎನ್. ಪಾಟೀಲ್.—ಬಹುಂತೇಕ ಕಮಿಷನ್ ಮುಂಗಿಯುವವರೆಗೆ ಅಲ್ಲಿ ಇರುತ್ತದೆ, ಆದರ ಬಗ್ಗೆ ಪೂರ್ತಿ ವಿವರ ಇಲ್ಲ. It is an International Organisation.

SRI M. S. KRISHNAN,—Might be.

SRI C. N. PATIL.—It is a decision of the G.A.D. and not labour Department.

SRI M. S, KRISHNAN.—It may be the decision of G.A.D. I don't know about it. But it concerns Labour Department. The Office of the Labour Commissioner and other Offices were shifted to some other building on one fine morning. Why did you shift and I want to know whether it is a temporary shifting or permanent one. How long they will be staying in that building? You are the Minister concerned, How can I ask G.A.D.?

SRI C.N. PATIL.—As far as the ownership of this building is concerned, it is the G.A.D. which allots buildings. Now it has been taken away and allotted to some International agency.

SRI M.S. KRISHNAN.—I want a definite reply. When are you going to occupy that building?

SRI C.N. PATIL.—I want notice.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಬೆಂಗಳೂರು ನಗರದಲ್ಲಿ ಬೇಕಾದಷ್ಟು ಬಿಲ್ಡಿಂಗ್ಸ್ ಇದ್ದವು, ಅವುಗಳಲ್ಲಿ ಯಾವುದಾದರೂ ಒಂದು ಕೊಡಬಹುದಿತ್ತು. ಇವೊತ್ತು ಎಲ್ಲ ಆಫೀಸುಗಳೂ ಒಂದು ಕಡೆ ಇದ್ದರೆ ಅವರ ಕೇಸುಗಳನ್ನು ವಾದ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ಇವೊತ್ತು ಲೇಬರ್ ಕಮಿಷನರ್ ಅವರ ಕಚೇರಿಯನ್ನು ನಿಲ್ಲಲಿಕ್ಕೆ ಸ್ಥಳವಿಲ್ಲದಂತಹ ಕಡೆಗೆ ಹಾಕಿದ್ದಾರೆ. ಒಂದೊಂದು ಕೋರ್ಟ್ ಒಂದೊಂದು ಕಡೆಗೆ ಕಳುಹಿಸಿ ಇವರಿಗೆ ಕೊಡತಕ್ಕ ಅವಶ್ಯಕತೆ ಏನು ಇತ್ತು? ಇವರಿಗೆ ಬೇರೆ ಯಾವುದಾದರೂ ಒಂದು ಬಿಲ್ಡಿಂಗ್ ಕೊಡಬಹುದಿತ್ತು.

SRI C. N. PATIL.—I will get it examined;

ಶ್ರೀ ಕೋಣಂದೂರು ಲಿಂಗಪ್ಪ.—ಈ ಒಂದು ಬಿಲ್ಡಿಂಗ್ ಸರ್ಕಾರಕ್ಕೆ ಸೇರಿದೆಯೋ, ಅಥವಾ ಖಾಸಗೀ ಜನರದ್ದೋ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸುತ್ತೀರಾ?

ಶ್ರೀ ಸಿ. ಎನ್. ಪಾಟೀಲ್,—ಆ ಬಿಲ್ಡಿಂಗ್ ಯಾರದು ಎಂದು ಮಾನ್ಯ ಸದಸ್ಯರಿಗೆ ಗೊತ್ತಿದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಈಗ ಬದಲಾವಣೆ ಮಾಡಿರುವ ಕಚೇರಿಗಳನ್ನು ಮತ್ತೆ ಒಂದು ಕಡೆಗೆ ಬರುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಸಿ. ಎನ್. ಪಾಟೀಲ್.—ಅದರ ಬಗ್ಗೆ ಯೋಚಿಸೋಣ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಈ ಜಾಗವನ್ನು ಅವರಿಗೆ ಖಾಯಂ ಆಗಿ ಕೊಡದೇ ಇದ್ದರೆ ಮತ್ತೆ ಅಲ್ಲಿ ಮೊದಲಿದ್ದಂತಹ ಕಚೇರಿಗಳಿಗೆ ಸ್ಥಳಾವಕಾಶ ಮಾಡಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಅದನ್ನು ದಯವಿಟ್ಟು ಸ್ಪಷ್ಟವಾಗಿ ತಿಳಿಸಬೇಕು

ಶ್ರೀ ಸಿ. ಎನ್. ಪಾಟೀಲ್.—ಈ ದಿಸೆಯಲ್ಲಿ ವ್ಯವಹರಿಸುತ್ತೇನೆ ಎನ್ನುವ ಆಶ್ವಾಸನೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ. —ಸ್ವಾಮಿ, ಲೇಬರ್ ಕಮಿಷನರ್ ಅವರ ಕಚೇರಿ ಪ್ಯಾಲೇಸ್ ರಸ್ತೆಯಲ್ಲಿ ಇದುದ್ದರಿಂದ, ವಕೀಲರಿಗೆ, ಎಂಪ್ಲಾಯರ್ಸ್‌ಗೆ ಬಹಳ ಅನುಕೂಲವಾಗಿತ್ತು. ಈಗ ಇದನ್ನು ಬೇರೆ ಕಡೆಗೆ ವರ್ಗಾಯಿಸಿರುವುದು ಸಾಧುವಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಹಿಂದೆ ಕೇಳಿರತಕ್ಕ ಪ್ರಶ್ನೆಯನ್ನೇ ಮತ್ತೆ ಕೇಳುತ್ತಿದ್ದರೆ ಹೇಗೆ?

Abolition of Courts

418. SMT. DAMAYANTHI BORE GOWDA (Srirangapatna).—Will the Minister for Law be pleased to state.—

the number of Courts intended to be abolished for want of work, in the State and Mandya District?

SRI H. SIDDAVEERAPPA(Minister for Law).—To date, one in South Kanara District. and one in North Kanara District. None in Mandya District.

SMT DAMAYANTHI BOREGOWDA.—May I know the names of the places Sir?

SRI H. SIDDAVEERAPPA.—One is Belthangadi in South Kanara and another is Mr. Yahya's place *i.e.* Bhatkal.

Employment opportunities to the dependents of deceased Government Servants.

431. SRI K. SIDDIAH(Santhemarahalli).—Will the Chief Minister be pleased to state.—

(*a*) whether it is a fact that there is a Government Order to the effect that the dependents of the deceased Government servants should be provided with employment preferably in the department in which the deceased employee was working;

(*b*) whether Government is aware that this benefit is very generously made use of although the dependents of the deceased employee have other source of livelihood?

SHRI D. DEVARAJ URS (Chief Minister) —

(*a*) Yes.

(*b*) No.

ಶ್ರೀ ಕೆ. ಸಿದ್ದಯ್ಯಸ್ವಾಮಿ —ಮೃತಪಟ್ಟ ನೌಕರರಿಗೆ ಉದ್ಯೋಗ ಕೊಡಬೇಕಾಗಿದ್ದರೆ ಏನಾದರೂ ಒಂದು ಫಾರಂ ಇದೆಯೇ ? ಒಂದು ವೇಳೆ ಇಲ್ಲದೇ ಇದ್ದರೆ, ಬೇಕಾದ ವಿವರಗಳನ್ನು ತಗೆದುಕೊಂಡು ಒಂದು ಪ್ರೊಫಾರ್ಮ ಮಾಡಿಸಿದರೆ ಒಳ್ಳೆಯದಲ್ಲವೆ ?

† SRI D. DEVARAJ URS.—It is a good suggestion.